ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆಕ್ರಮ ಸಕ್ರಮ ಕಮಿಟಿಗಳಿಗೆ ಇಬ್ಬಿಬ್ಬರು ಸರ್ವೇಯರ್‌ಗಳನ್ನು ನೇಮಕ ಮಾಡಿದ್ದೇವೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ನಿಮ್ಮ ಜಿಲ್ಲಾಧಿಕಾರಿಗಳು ಸರ್ವೇಯರ್‌ಗಳನ್ನು ಕರೆಸಿಕೊಳ್ಳುವುದಕ್ಕೆ ಹೇಳಿ. ಕಡೂರು ತಾಲ್ಲೂಕಿನಲ್ಲಿ ಎಷ್ಟು ಜನ ಸರ್ವೇಯರ್‌ಗಳು ಇದ್ದಾರೆ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಕೆಲವು ಕಡೆ ಇನ್ನೂ ಸರ್ವೇಯರ್‌ಗಳನ್ನು ನೇಮಕ ಮಾಡಬೇಕಾಗಿದೆ. ಈಗ ಅಭಾವ ಇರುವುದರಿಂದ ಖಾಸಗಿಯವರನ್ನು ನೇಮಿಸಿ ಈಗ ಮಾಡುತ್ತೇವೆ.

ಚಿಂತಾಮಣಿ ಕೃಷಿ ಮಾರುಕಟ್ಟೆಗೆ ಶೀಥಲ ಕೇಂದ್ರ ಒದಗಿಸುವುದು

109 (1002) ಶ್ರೀ ಚೌಡರೆಡ್ಡಿ (ಚಿಂತಾಮಣಿ): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕೃಷಿ ಮಾರುಕಟ್ಟೆಗೆ ಶೀಥಲ ಕೇಂದ್ರವು ಸರ್ಕಾರದಿಂದ ಮಂಜೂರಾಗಿದೆಯೇ; ಹಾಗಿದ್ದಲ್ಲಿ ಮಂಜೂರಾತಿ ತಾರೀಖು ತಿಳಿಸುವಿರಾ;

ಆ) ಕೃಷಿ ಮಾರುಕಟ್ಟೆ ಈವರೆಗೆ ಪ್ರಗತಿ ಆಗದೇ ಇರವುದಕ್ಕೆ ಕಾರಣವೇನು?

ಇ) ಹಣ್ಣು ತರಕಾರಿ ಮಾರುಕಟ್ಟೆಗೆ ಸ್ಥಳ ಸಾಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಮಾರುಕಟ್ಟೆ ವಿಸ್ತರಣೆ ಮಾಡುವ ಬಗ್ಗೆ ಸರ್ಕಾರ ಏನಾದರೂ ತೀರ್ಮಾನಿಸಿದೆಯೇ?

ಶ್ರೀ ಆರ್. ಬಿ.ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಯವರು ಕೃಷಿ ಮಾರುಕಟ್ಟೆ ನಿರ್ದೇಶಕರು ದಿನಾಂಕ 03-02- 97ರಂದು ಸಮಿತಿಯ ಸ್ವಂತ ನಿಧಿಯಿಂದ ಶೀಥಲಗೃಹವನ್ನು ನಿರ್ಮಿಸಲು ಮಂಜೂರಾತಿ ನೀಡಿರುತ್ತಾರೆ.

ಆ) ಈ ಮಾರುಕಟ್ಟೆಯಲ್ಲಿ 75 ನಿವೇಶನಗಳಲ್ಲಿ ಅಂಗಡಿ-ಮ-ಗೋದಾಮು ನಿರ್ಮಿಸಿ, ವ್ಯಾಪಾರ ವಹಿವಾಟು ನಡೆಸಲಾಗುತ್ತಿದೆ. ಹಾಗೂ ಎಲ್ಲಾ ಅವಶ್ಯಕ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಇದು ಪ್ರಗತಿಯಲ್ಲಿರುತ್ತದೆ.

ಇ) ಹೌದು

ಈ) ಈಗಿರುವ ಜಾನುವಾರು ಮಾರುಕಟ್ಟೆ ಸ್ಥಳವನ್ನು ಹಣ್ಣು ತರಕಾರಿ ವಹಿವಾಟಿಗೆ ಉಪಯೋಗಿಸಿಕೊಳ್ಳಲು ಹಾಗೂ ಕರಿಯಪಲ್ಲಿ ಗ್ರಾಮದ ಪಕ್ಕದಲ್ಲಿರುವ ಸರ್ವೆ ನಂ. 128ರ ಗೋಮಾಳ ಜಮೀನಿನಲ್ಲಿ 10 ಎಕರೆ ಜಮೀನು ಪಡೆಯಲು ತೀರ್ಮಾನಿಸಿದೆ.

ಶ್ರೀಚೌಡರೆಡ್ಡಿ: ಮಾನ್ಯ ಅಧ್ಯಕ್ಷರೇ. ಈ ಶೀಥಲ ಗೃಹವನ್ನು 1997ನೇ ಇಸವಿಯಲ್ಲಿ ಮಂಜೂರಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಇವತ್ತಿಗೂ ಅದು ಆಗುತ್ತಿಲ್ಲ, ವಿಳಂಬವಾಗುತ್ತಿದೆ. ಆದರೆ ಹಿಂದಿನ ಸಾಲಿನಲ್ಲಿ ವಿಳಂಬ ಮಾಡಿದ್ದಾರೆ' ಅದನ್ನು ಬೇಗ ಮಾಡಿಕೊಡಬೇಕೆಂದು ತಮ್ಮ

ಮುಖಾಂತರ ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಹಣ್ಣು ಮತ್ತು ತರಕಾರಿ ಮಾರುಕಟ್ಟೆಗೆ ಈಗ ಇರುವ ಜಾಗ ಕಡಿಮೆ ಇದೆ. ಈಗ ಬೇರೆ ಬೇರೆ ತಾಲ್ಲೂಕುಗಳಿಂದ ಹಣ್ಣು ಮತ್ತು ತರಕಾರಿಗಳು ಜಾಸ್ತಿ ಚಿಂತಾಮಣಿಗೆ ಬರುತ್ತಿದೆ. ಅದಕ್ಕೆ ಸರ್ವೆ ನಂಬರ್ 128ರ ಗೋಮಾಳದಲ್ಲಿ ಹತ್ತು ಎಕರೆಯನ್ನು ತೆಗೆದುಕೊಂಡು ಮಾಡುತ್ತೇವೆಂದು ಹೇಳಿದ್ದಾರೆ. ಅದರ ಬಗ್ಗೆ ಬೇಗ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಆರ್. ಬಿ.ತಿಮ್ಮಾಪುರ್ : ಮಾನ್ಯ ಅಧ್ಯಕ್ಷರೇ, ಶೀಥಲ ಗೃಹ 1997ರಿಂದ ಇಲ್ಲಿಯವರೆಗೂ ತಡವಾದದ್ದು ನಿಜ. ಅದಕ್ಕೆ ಹಲವಾರು ತಾಂತ್ರಿಕ ಕಾರಣಗಳನ್ನು ಒಡ್ಡಿ ಅಲ್ಲಿಯ ಸಮಿತಿಯವರು ಮೂರು-ನಾಲ್ಕು ಸಲ ಎಸ್ಟಿಮೇಟನ್ನು ಬದಲಾವಣೆ ಮಾಡುವ ಪರಿಸ್ಥಿತಿ ನಿರ್ಮಾಣವಾಯಿತು. ಈ ಸಲ ಈಗಾಗಲೇ ಎಲ್ಲವನ್ನೂ ಒಳಗೊಂಡಂಥ....

MR. SPEAKER : This is only pertaining to Chintamani taluk. I will not allow others.

ಶ್ರೀ ಆರ್.ಬಿ. ತಿಮ್ಮಾಪುರ್ : ಮಂಜೂರಾತಿಯನ್ನು ಈಗಾಗಲೇ ಕೊಟ್ಟಿದ್ದೇವೆ. ಆದಷ್ಟು ಶೀಘ್ರದಲ್ಲಿಯೇ ಅದನ್ನು ಮುಗಿಸಿಕೊಡುವ ಪ್ರಯತ್ನವನ್ನು ಮಾಡುತ್ತೇವೆ. ಇನ್ನು ತರಕಾರಿ ಮತ್ತು ಹಣ್ಣು ಮಾರುಕಟ್ಟೆಯ ಬಗ್ಗೆ ಹೇಳಿದ್ದಾರೆ. ತರಕಾರಿಗಳಿಗೆ ಒಟ್ಟು 24, ಮಾವಿನ ಹಣ್ಣುಗಳಿಗೆ 50 ಷೆಡ್‌ಗಳನ್ನು ಹಾಗೂ ಬಾಳೆಹಣ್ಣಿಗೆ 4 ಗೋದಾಮುಗಳನ್ನು ಮಾಡಿದ್ದೇವೆ. ಆದಷ್ಟು ಶೀಘ್ರದಲ್ಲೇ ಆ ವ್ಯಾಪಾರವನ್ನು ಸ್ಥಳಾಂತರಗೊಳಿಸುವುದರ ಜೊತೆಗೆ ಇನ್ನು ಹೆಚ್ಚಿನ ಜಾಗಬೇಕಾಗಿದೆ. ಗೋಮಾಳದ ಜಾಗ ಇದೆ. ಅದರ ಬಗ್ಗೆ ತಹಶೀಲ್ದಾರ್‌ರವರಿಗೆ ನಮ್ಮ ಸಮಿತಿಯವರು ಕಾಗದವನ್ನು ಬರೆದಿದ್ದಾರೆ. ಅದು ಬಂದ ತಕ್ಷಣದಲ್ಲೇ ಆ ಕೆಲಸವನ್ನು ನಾವು ಪ್ರಾರಂಭ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಕಳೆದ ಆಯವ್ಯಯದಲ್ಲಿ ಶೀಥಲ ಗೃಹಗಳನ್ನು ಕಟ್ಟಿಸುವುದಕ್ಕೆ ನಾವು ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುತ್ತೇವೆ ಎನ್ನುವ ಮಾತನ್ನು ಸರ್ಕಾರ ತಿಳಿಸಿದೆ. ಜೊತೆಗೆ ಈ ವರ್ಷ ರೈತರ ಪರಿಸ್ಥಿತಿ ಏನಾಗಿದೆ ಎಂದು ಗೊತ್ತಿದೆ. ಆಲೂಗೆಡ್ಡೆ ಇವತ್ತಿನ ದಿವಸ ಮಾರುಕಟ್ಟೆಗೆ ಹೋಗುವುದರ ಬದಲಾಗಿ ತಿಪ್ಪೆಗೆ ಹೋಗಿ ಗೊಬ್ಬರವಾಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ 1997ರಲ್ಲಿ ಮಂಜೂರಾಗಿರುವ ಈ ಶೀಥಲಗೃಹ ಇಲ್ಲಿಯವರೆಗೂ ಶೀಥಲಗೃಹದಲ್ಲೇ ಇದೆ. ಇದಕ್ಕೆ ಕಾರಣವೇನು? ಮಾನ್ಯ ಮಂತ್ರಿಗಳು ಬದಲಾವಣೆ ನಕ್ಷೆಯ ಬಗ್ಗೆ ಹೇಳುತ್ತಿದ್ದಾರೆ. ಇದನ್ನು ಮಾರುಕಟ್ಟೆ ಸಮಿತಿಯವರು ಮಾಡುವುದಕ್ಕಾಗುವುದಿಲ್ಲ. ಟೆಕ್ನಿಕಲ್ ಆಗಿರುವವರು ಅದನ್ನು ಮಾಡಬೇಕಾಗಿರುವುದು. ಇವರ ಕೇಂದ್ರ ಕಛೇರಿಗೆ ಬಂದ ಮಾಹಿತಿಯನ್ನು ಒದಗಿಸಬೇಕಾಗಿದೆ. ಇದೆಲ್ಲ ಬಿಟ್ಟು ಮಾರುಕಟ್ಟೆ ಸಮಿತಿಗೆ ಏನು ಗೊತ್ತಿಲ್ಲವೇ ಇರುವವರ ಮೇಲೆ ನಕ್ಷೆ ಬದಲಾಯಿಸುತ್ತಾರೆ ಎನ್ನುವ ಕುಂಟುನೆಪವನ್ನು ಹೇಳುವುದು ಬೇಡ. ಎಷ್ಟನೇ ತಾರೀಖಿನ ಒಳಗಾಗಿ ಈ ಶೀಥಿಲ ಗೃಹವನ್ನು ಮುಗಿಸುತ್ತೇವೆಂದು ಸರ್ಕಾರ ಆಶ್ವಾಸನೆ ಕೊಡಬೇಕು.

ಶ್ರೀ ಆರ್. ಬಿ.ತಿಮ್ಮಾಪುರ : ಮಾನ್ಯ ಅಧ್ಯಕ್ಷರೇ, ಈ ಕಾಮಗಾರಿ 1997 ರಿಂದ ತಡವಾಗಿ ಇನ್ನು ಮುಗಿಯಲಾರದ್ದಕ್ಕೆ ಹಲವಾರು ಕಾರಣಗಳನ್ನು ನಾನು ಈಗಾಗಲೇ ಹೇಳಿದ್ದೇನೆ. ಅದಕ್ಕೆ ತಾಂತ್ರಿಕ ಸಲಹೆಗಾರರು ಮೊದಲು 60 ಎಂಎಂ ದಪ್ಪ ಲೆನ್ಸ್ ಇರಬೇಕೆಂದು ಹೇಳಿದರು. ಆ ನಂತರ ಬೇರೆಯವರು

ಕೃಷ್ಣಮೂರ್ತಿ ಎನ್ನುವವರು 80 ಎಂ ಎಂ ದಪ್ಪ ಲೆನ್ಸ್ ಇರಬೇಕೆಂದು ಹೇಳಿದರು. ಈ ರೀತಿ ನಾವ್ಯಾರು ತಾಂತ್ರಿಕ ಸಲಹೆಗಾರರನ್ನು ಇಟ್ಟಿದ್ದೆವು. ಅವರುಗಳೇ ಬದಲಾವಣೆ ಮಾಡುವ ಕೆಲಸವನ್ನು ಮಾಡಿದ್ದಾರೆ. ಇದರಿಂದಾಗಿ ಅದು ತಡವಾಗಿದೆ; ಈಗ ಸಮಿತಿಯಲ್ಲಿರುವ ಹಣ 14 ಲಕ್ಷ ಅದಕ್ಕೆ ಒಟ್ಟು 47 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆನು ಬೋರ್ಡ್ ಮುಂಖಾಂತರವಾಗಲೀ ಅಥವಾ ಯಾವುದೇ ಸಮಿತಿಯ ಮುಖಾಂತರವಾಗಲೀ ಹಣದ ವ್ಯವಸ್ಥೆಯನ್ನು ಮಾಡಿ ಶೀಘ್ರದಲ್ಲೇ ಅದನ್ನು ಮುಗಿಸಿಕೊಡುವ ಕೆಲಸವನ್ನು ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಶೀಘ್ರ, ಶೀಘ್ರ ಎಂದು ಹೇಳಿ 1997 ರಿಂದ 2001 ನೇ ಇಸವಿಯಲ್ಲಿ ಇವತ್ತಿನ ದಿವಸ ಇದ್ದೇವೆ. ಸುಮಾರು ಐದು ವರ್ಷಗಳ ಕಾಲಾವಧಿ ಮುಗಿದಿದೆ. ಇಷ್ಟು ತಾರೀಖಿನ ಒಳಗಾಗಿ ಮುಗಿಸುವುದಕ್ಕೆ ಸಾಧ್ಯ ಇದೆ ಎಂದು ಹೇಳಬೇಕು. ಶೀಘ್ರವಾಗಿ ಎನ್ನುವ ಉತ್ತರವನ್ನು ಕೊಟ್ಟು ಕೊಟ್ಟು ನಾವು ಸುಸ್ತಾಗಿ ಇಲ್ಲಿಗೆ ಬಂದು ಕುಳಿತಿದ್ದೇವೆ. ಆ ರೀತಿ ಮಾಮೂಲಿ ಉತ್ತರ ಬೇಕಾಗಿಲ್ಲ. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಇವತ್ತು ಯಾವ ಅವಧಿಯೊಳಗಾಗಿ ಈ ಶೀಥಲ ಗೃಹವನ್ನು ಮುಗಿಸುತ್ತಿದೆ ಎಂಬುದನ್ನು ದಯವಿಟ್ಟು ಹೇಳಿ.

ಅಧ್ಯಕ್ಷರು: ಒಂದು ಅಂದಾಜು ತಾರೀಖು ಹೇಳಿ.

ಶ್ರೀ ಆರ್. ಬಿ.ತಿಮ್ಮಾಪುರ್ : ಮಾನ್ಯ ಅಧ್ಯಕ್ಷರೇ, ಬೈರೇಗೌಡರು ಅವರ ಕಾಲದಲ್ಲಿ ಬಹಳ ಆಸಕ್ತಿವಹಿಸಿ ಹಾಗೆಯೇ ಇಟ್ಟಿದ್ದಾರೆ. ನಾವು ಆರು ತಿಂಗಳಲ್ಲಿಯೇ ಅದನ್ನು ಮುಗಿಸಿಕೊಡುತ್ತೇವೆ.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೇ, ವಾಸ್ತವಾಂಶ ಏನಿದೆ ಎಂದರೆ 1994 ರಲ್ಲಿ ಇದು ಮಂಜೂರಾಯಿತು. ಅದು ಹಾಗೆ ಕೋಲ್ಡ್ ಸ್ಟೋರೇಜ್‌ಗೆ ಹೋಯಿತು. ಆಮೇಲೆ ಮುಖ್ಯಮಂತ್ರಿಗಳನ್ನು ಕರೆಸಿಕೊಂಡು ಫೌಂಡೇಷನ್ ಸ್ಟೋನೆಲ್ಲಾ ಹಾಕಿದರು. ಬೈರೇಗೌಡರನ್ನು ಕೇಳುತ್ತೇನೆ. ಕೋಲ್ಡ್ ಸ್ಟೋರೇಜ್‌ಗೆ ಹಾಕುವುದನ್ನು ಅವರು ಮೊದಲೇ ಸ್ಟಾರ್ಪ್ ಮಾಡಿದ್ದು, ಆ ಮೇಲೆ ಇವರು ಮಾಡಿದರು.

ಸಕಲೇಶಪುರ ನಗರದಲ್ಲಿ ಗೃಹ ಮಂಡಳಿ ಮನೆಗಳ ವಿತರಣೆ

110 (1267) ಶ್ರೀ ಶಿವಪ್ಪ ಬಿ.ಎ. (ಸಕಲೇಶಪುರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಸಕಲೇಶಪುರ ನಗರದಲ್ಲಿ ಗೃಹ ಮಂಡಳಿಯಿಂದ ಕೆಟ್ಟಲಾಗಿರುವ ಮನೆಗಳ ಸಂಖ್ಯೆ ಎಷ್ಟು?

ಆ) ಎಷ್ಟು ಮನೆಗಳು ಫಲಾನುಭವಿಗಳಿಗೆ ಕೊಡಲಾಗಿದೆ? (ಅವರುಗಳ ಹೆಸರು ಸೂಚಿಸುವುದು)

ಇ) ಉಳಿದ ಮನೆಗಳನ್ನು ವಿತರಿಸಲು ತಡವಾಗಲು ಕಾರಣವೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ) 88 ಮನೆಗಳು

ಆ) 56 ಮನೆಗಳನ್ನು ಫಲಾನುಭವಿಗಳಿಗೆ ಹಂಚಲಾಗಿದೆ. ಫಲಾನುಭವಿಗಳ ಹೆಸರುಗಳನ್ನು ಅನುಬಂಧ- 1 ರಲ್ಲಿ ನೀಡಲಾಗಿದೆ.